ಹಾಗೂ ಒರಟುತನದಿಂದ ಆಗಾಗ ವಿವಾದಗಳನ್ನು ಸೃಷ್ಟಿಸುತ್ತಲೇ ಇರುವ ದರ್ಶನ್, ಈ ಬಾರಿ ಕೊಲೆ ಆರೋಪದಲ್ಲಿ ಜೈಲು ಸೇರಿದ್ದಾರೆ. ಅವರ ಮುಂದಿನ ಸಿನಿಮಾ ಜೀವನ ಅಸ್ಪಷ್ಟವಾಗಿದೆ. ದರ್ಶನ್ ಜೈಲು ಸೇರಿದ್ದರಿಂದಾಗಿ ಚಿತ್ರೋದ್ಯಮಕ್ಕೆ ದೊಡ್ಡ ಪ್ರಮಾಣದ ನಷ್ಟವಾಗಿದೆ.

‘ಕೋಟಿಗೊಬ್ಬ 3’ (2021), ‘ವಿಕ್ರಾಂತ್ ರೋಣ’ (2022) ಚಿತ್ರಗಳಿಗಿಂತಲೂ ಕಿರುತೆರೆಯ ‘ಬಿಗ್ ಬಾಸ್’ ರಿಯಾಲಿಟಿ ಶೋ ವೇದಿಕೆಯ ನಿರೂಪಕರಾಗಿಯೇ ಸುದೀಪ್ ಇತ್ತೀಚಿನ ಮೂರ್ನಾಲ್ಕು ವರ್ಷಗಳಲ್ಲಿ ಹೆಚ್ಚು ಚಾಲ್ತಿಯಲ್ಲಿರುವಂತಿದೆ. ಈ ವಿಶ್ಲೇಷಣೆ ಮುದ್ರಣಕ್ಕೆ ಹೊರಡುವ ಸಂದರ್ಭದಲ್ಲೂ, ಸದ್ಯದಲ್ಲೇ ಆರಂಭವಾಗುತ್ತದೆ ಎನ್ನಲಾದ ‘ಬಿಗ್ ಬಾಸ್’ ಹೊಸ ಆವೃತ್ತಿಯನ್ನು ಸುದೀಪ್ ನಿರ್ವಹಿಸುತ್ತಾರೋ ಇಲ್ಲವೋ ಎನ್ನುವುದೇ ಅಭಿಮಾನಿಗಳ ಚರ್ಚೆಯ ವಿಷಯವಾಗಿದೆ. ಸಿನಿಮಾ ಕಾರಣದಿಂದಾಗಿ ಚರ್ಚೆಯಲ್ಲಿರಬೇಕಾದ ಜನಪ್ರಿಯ ನಟನೊಬ್ಬ ಕಿರುತೆರೆ ಶೋ ಮೂಲಕ ಸುದ್ದಿಯಲ್ಲಿರುವುದಕ್ಕೆ ಏನು ಹೇಳುವುದು?



ಭಿನ್ನ ಕಥನಗಳ ‘ರೂಪಾಂತರ’

ಯಶ್ ಅವರದು ಬೇರೆಯದೇ ಕಥೆ. ಏಳು ವರ್ಷಗಳ ಅವಧಿಯಲ್ಲಿ ಅವರ ನಟನೆಯ ಎರಡು ಸಿನಿಮಾಗಳಷ್ಟೇ ತೆರೆಕಂಡಿವೆ. 2018ರ ‘ಕೆಜಿಎಫ್: ಚಾಪ್ಟರ್ 1’ ಹಾಗೂ 2022ರ ‘ಕೆಜಿಎಫ್: ಚಾಪ್ಟರ್ 2’ ಸಿನಿಮಾಗಳು ತೆರೆಕಂಡು ದೊಡ್ಡ ಯಶಸ್ಸು ಗಳಿಸಿದವು. ಆ ಯಶಸ್ಸಿನಿಂದ ಕನ್ನಡ ಚಿತ್ರರಂಗಕ್ಕಾದದ್ದು ಲಾಭವೋ ನಷ್ಟವೋ ಎನ್ನುವ ಲೆಕ್ಕಾಚಾರ ಸುಲಭಕ್ಕೆ ಅರ್ಥವಾಗುವಂತಹದ್ದಲ್ಲ.

ಧ್ರುವ ಸರ್ಜಾ ಅವರ ಚಿತ್ರಗಳದೂ ಡೈನೊಸಾರ್ ಪ್ರಸವವೇ! ಹನ್ನೆರಡು ವರ್ಷಗಳ ಅವರ ವೃತ್ತಿಜೀವನದಲ್ಲಿ ತೆರೆಕಂಡಿರುವುದು ನಾಲ್ಕು ಚಿತ್ರಗಳಷ್ಟೇ. ಐದನೇ ಸಿನಿಮಾ ‘ಮಾರ್ಟಿನ್’ ಈಗ ತೆರೆಕಾಣಲು ಸಿದ್ಧವಾಗಿದೆ.

ಉಳಿದವರಿಗೆ ಹೋಲಿಸಿದರೆ ಶಿವರಾಜ್‌ಕುಮಾರ್ ಹೆಚ್ಚು ಸಕ್ರಿಯರಾಗಿದ್ದಾರೆ. ‘ಭಜರಂಗಿ 2’ (2021), ‘ಬೈರಾಗಿ’ (2022), ‘ವೇದ’ (2022), ‘ಘೋಸ್ಟ್’ (2023); ‘ಕರಟಕ ದಮನಕ’ (2024) – ಹೀಗೆ ಶಿವರಾಜ್ ಸಿನಿಮಾಗಳು ನಿಯಮಿತವಾಗಿ ತೆರೆಕಂಡಿವೆ. ಅತಿಥಿ ಕಲಾವಿದರಾಗಿ ನಟಿಸಿದ ‘ಜೈಲರ್’, ‘ಕ್ಯಾಪ್ಟನ್ ಮಿಲ್ಲರ್’ ಚಿತ್ರಗಳೂ ಶಿವರಾಜ್‌ರನ್ನು ಕಲಾವಿದನಾಗಿ ಬೇಡಿಕೆಯಲ್ಲಿಟ್ಟಿವೆ.

ಚಿತ್ರಮಂದಿರಗಳಿಗೆ ನೋಡುಗರನ್ನು ಆಕರ್ಷಿಸುವ ನಿಟ್ಟಿನಲ್ಲಿ ತಾರಾ ವರ್ಚಸ್ಸಿನ ನಾಯಕ ನಟರ ಸಿನಿಮಾಗಳು ನಿಯಮಿತವಾಗಿ ತೆರೆಕಾಣದೆ ಹೋದರೆ ಚಿತ್ರಮಂದಿರಗಳಿಗೆ ಜನ ಬರುವುದು ಕಷ್ಟ ಎನ್ನುವ ಸಂಗತಿ ಸಿನಿಮಾ ಇತಿಹಾಸದುದ್ದಕ್ಕೂ ಮತ್ತೆ ಮತ್ತೆ ಸಾಬೀತಾಗಿದೆ. ತಾರಾ ವರ್ಚಸ್ಸಿನ ನಟನೊಬ್ಬ ವರ್ಷಕ್ಕೆ ಎರಡು ಮೂರು ಸಿನಿಮಾಗಳಲ್ಲಾದರೂ ನಟಿಸುವುದು ಚಿತ್ರೋದ್ಯಮದ ಹಿತದೃಷ್ಟಿಯಿಂದ ಅಗತ್ಯ. ಆದರೆ, ಕನ್ನಡದ ಹೀರೊಗಳು ಮೂರ್ನಾಲ್ಕು ವರ್ಷಗಳಿಗೊಂದು ಸಿನಿಮಾದಲ್ಲಿ ನಟಿಸುತ್ತಿದ್ದಾರೆ. ವರ್ಷಕ್ಕೆ ಕನಿಷ್ಠ ಒಂದೋ ಎರಡೋ ಸಿನಿಮಾ ಮಾಡದವರನ್ನು ನಾಯಕ ಎನ್ನುವುದೋ ಅತಿಥಿ ನಾಯಕ ಎನ್ನುವುದೋ? ವರ್ಷಗಟ್ಟಲೆ ಸಮಯ ತೆಗೆದುಕೊಂಡು ಮಾಡುವ ಸಿನಿಮಾಗಳಾದರೂ ಮಹೋನ್ನತ ಕೃತಿಗಳಾಗಿರುತ್ತವೆಯೆ? ಮತ್ತದೇ ಹೊಡಿ ಕಡಿ ಮಬ್ಬು ತಬ್ಬು ರಿಬ್ಬು ಸಿದ್ಧಸೂತ್ರಗಳ ಮಿಸಳಬಾಜಿಗಳು.

## ಸೋಲಿಗೆ ನೂರೆಂಟು ಕಾರಣಗಳು

‘ಪ್ಯಾನ್ ಇಂಡಿಯಾ’ ಹಣೆಪಟ್ಟಿಯಲ್ಲಿ ತಮ್ಮನ್ನು ಗುರ್ತಿಸಿಕೊಂಡಿರುವ ನಾಯಕನಟರ ಸೋಮಾರಿತನದಿಂದಾಗಿ, ಥಿಯೇಟರ್‌ಗಳಿಗೆ ನೋಡುಗರನ್ನು ಕರೆತರುವ ಸಾಮರ್ಥ್ಯದ ಸಿನಿಮಾಗಳ ಕೊರತೆಯಾಗಿದೆ. ಇದು ಕನ್ನಡ ಚಿತ್ರರಂಗದ ಇಂದಿನ ದುಸ್ಥಿತಿಗೆ ಪ್ರಮುಖ ಕಾರಣಗಳಲ್ಲೊಂದಾಗಿದೆ.

ಬೆಳ್ಳಿತೆರೆಯಲ್ಲಿ ಮಾತ್ರವಲ್ಲ, ಕಿರುತೆರೆಯೂ ಕನ್ನಡ ಚಿತ್ರರಂಗದ ಪಾಲಿಗೆ ಆಶಾದಾಯಕವಾಗಿಲ್ಲ. ದೊಡ್ಡಿ ಬಾಗಿಲು ತೆರೆದ ಮೇಲೆ ಕಿರುತೆರೆಯಲ್ಲಿ ಡಬ್ಬಿಂಗ್ ಚಿತ್ರಗಳ ಫಸಲು ಹುಲುಸಾಗಿ, ನೇರವಾಗಿ ಕನ್ನಡದಲ್ಲಿ ರೂಪುಗೊಂಡ ಸಿನಿಮಾಗಳಿಗೆ ಬೇಡಿಕೆ ಕಡಿಮೆಯಾಗಿದೆ. ಹಾಗಾಗಿ, ವ್ಯಾಪಾರ ಬಲ್ಲ ಕೆಲವಷ್ಟೇ ನಟ–ನಿರ್ದೇಶಕರ ಸಿನಿಮಾಗಳನ್ನು ಹೊರತುಪಡಿಸಿದರೆ ಉಳಿದ ಚಿತ್ರಗಳನ್ನು ವಾಹಿನಿಗಳು ಕೊಂಡುಕೊಳ್ಳುತ್ತಿಲ್ಲ. ಒಟಿಟಿ ವೇದಿಕೆಗಳಂತೂ ಕನ್ನಡ ಸಿನಿಮಾಗಳನ್ನು ಮೂಸಿಯೂ ನೋಡದ ಸ್ಥಿತಿ ತಲುಪಿವೆ. ಟೀವಿ–



ಮತ್ಸ್ಯಗಂಧದಲ್ಲಿ ಪೃಥ್ವಿ ಅಂಬರ್